ಜಾರಿ ಬಾವಿಗೆ ಬಿದ್ದು ಅಸುನೀಗಿದ್ದ. ಅಲ್ಲೇ ಹತ್ತಿರದಲ್ಲಿ ಮಗನನ್ನು ಮಣ್ಣು ಮಾಡಿ ಅದಕ್ಕೆ ಕಲ್ಲಿನಿಂದ ಸಮಾಧಿಯನ್ನು ಕಟ್ಟಿಸಿದ್ದ ಗದ್ದಿಗ್ಯಪ್ಪ ಅದರ ಮೇಲೆ 'ಗಾಂಧಿ' ಎಂಬುದಾಗಿ ಕಲ್ಲೊಂದರಲ್ಲಿ ಕೊರೆಸಿದ್ದ.

ಮಗನ ಸಾವು ಗಂಡ ಹೆಂಡಿರಿಗೆ ಮತ್ತಿನ್ನೆಂದೂ ಚೇತರಿಸಿಕೊಳ್ಳಲಾರದಂಥ ಹೊಡೆತ ಕೊಟ್ಟುಬಿಟ್ಟಿತ್ತು. ಅದೇ ನೆಪದಲ್ಲಿ ಆಜಮ್ಮ ಹಾಸಿಗೆ ಹಿಡಿದು ಬಿಟ್ಟಿದ್ದಳು. ಗದ್ದಿಗ್ಯಪ್ಪನಿಗೂ ಮಂಕು ಬಡಿದುಬಿಟ್ಟಿತ್ತು. ಆ ಸಮಯದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗಿದ್ದ ಭೂದಾನದ ರಾಮಣ್ಣ ತಿಂಗಳುಗಟ್ಟಲೆ ಅಲ್ಲೇ ಉಳಿದಿದ್ದ. ಗದ್ದಿಗ್ಯಪ್ಪನಿಗೆ ರಾಮಣ್ಣ ಹಿಂದಿಗಿಂತಲೂ ಹತ್ತಿರದವನಾಗಿಬಿಟ್ಟಿದ್ದ. ಇಬ್ಬರೂ ಭಜನೆ,ತತ್ವ ಪದಗಳ ಸಂಗಕ್ಕಾಗಿ ಹೆಚ್ಚೆಚ್ಚು ಹೋಗತೊಡಗಿದ್ದರು. ಒಂಚೂರು ಲಕೇವಾಗತೊಡಗಿದ್ದ ಗದ್ದಿಗ್ಯಪ್ಪನಿಗೆ ಬಿಡುವಿನ ಹೊತ್ತಲ್ಲಿ ರಾಮಣ್ಣ ದಿನವೂ ಗಾಂಧೀಜಿ ಹಾಗೂ ವಿನೋಬಾ ಭಾವೆಯವರ ಆಯ್ದ ಸಂದರ್ಭಗಳನ್ನ ತನ್ನಲ್ಲಿದ್ದ ಪುಸ್ತಕಗಳಿಂದ ಓದಿ ಹೇಳುತ್ತಿದ್ದ. ಇದರಿಂದ ಮತ್ತಷ್ಟು ಗೆಲುವಾಗತೊಡಗಿದ್ದ ಗದ್ದಿಗ್ಯಪ್ಪನಿಗೆ ಲೋಕ ಮತ್ತೊಂದು ಥರವೇ ಕಾಣೋಕೆ ಶುರುವಾಗಿಬಿಟ್ಟಿತ್ತು. ಜೊತೆಗೆ ತನಗೆ ಬೇಕಾದ್ದಕ್ಕಿಂತಲೂ ಹೆಚ್ಚು ಜಮೀನಿರುವುದರ ಬಗ್ಗೆ ಹಾಗೂ ಅದನ್ನು ನಿಭಾಯಿಸಲು ತನ್ನಿಂದ ಆಗುತ್ತಿಲ್ಲದ್ದರ ಬಗೆಗಿನ ಅಸಮಾಧಾನ ಆಗಾಗ ಅವನ ಮನದಲ್ಲಿ ಸುಳಿದಾಡ ಹತ್ತಿತ್ತು.

ಹಿಂಗೆ ಗದ್ದಿಗ್ಯಪ್ಪ ಒಂದು ರೀತಿಯ ಬದಲಾವಣೆಗೆ ಒಳಗಾಗುತ್ತಿದ್ದಂಥ ಹೊತ್ತಲ್ಲೇ ಆಜಮ್ಮ ಮತ್ತಿನ್ನೆಂದೂ ಗೆಲುವಿನ ಹಾದಿಯನ್ನು ತುಳಿಯಲಾರದಳಂತೆ ಕುಸಿದು ಹೋಗುತ್ತಿದ್ದುದರ ಜೊತೆಗೆ ಮೌನಕ್ಕೆ ಜಾರತೊಡಗಿದ್ದಳು. ಇದರಿಂದ ದಿಗಿಲಿಗೆ ಬಿದ್ದ ಗದ್ದಿಗ್ಯಪ್ಪ ಹಿಂಗೇಬಿಟ್ಟರೆ ಹೆಂಡತಿಯನ್ನೂ ಕಳೆದುಕೊಳ್ಳಬೇಕಾದೀತೆಂಬ ಭಯದಿಂದ ದೊಡ್ಡಾಸ್ಪತ್ರೆಯೊಂದಕ್ಕೆ ಕರೆದೊಯ್ಯುತ್ತಾನೆ. ಆಗ ಗೊತ್ತಾಯ್ತು-ಆಜಮ್ಮ ಕ್ಯಾನ್ಸರ್ ಖಾಯಿಲೆಗೆ ತುತ್ತಾಗಿ,ಅದಾಗಲೇ ನಾಲ್ಕನೆಯ ಹಂತದಲ್ಲಿದೆ. ಗದ್ದಿಗ್ಯಪ್ಪ ಗದ್ಗದಿತನಾದದ್ದು ಬಿಟ್ಟರೆ ಏನನ್ನೂ ಯೋಚಿಸಲಾರದವನಾಗಿ ಬಿಟ್ಟ. ಯಾರ ಸಂತೈಕೆಯ ಮಾತುಗಳೂ ಅವನ ಎದೆಗಿಳಿಯದಾದವು. ಅಲ್ಲಿಗೆ ಒಂದೆರಡು ತಿಂಗಳಿಗೆ ಆಜಮ್ಮನೂ ಇಹದ ಬದುಕಿಗೆ ವಿದಾಯ ಹೇಳಿ ಬಿಟ್ಟಿದ್ದಳು.

ಅದಾದ ಮೇಲೆ ಗದ್ದಿಗ್ಯಪ್ಪನೊಳಗೆ ಆಗ ಹತ್ತಿದ ಬದಲಾವಣೆಗಳು ಬಾಹ್ಯದಲ್ಲೂ ಗೋಚರಿಸತೊಡಗಿದ್ದವು. ದಿನ ಕಳೆದಂತೆ ಗದ್ದಿಗ್ಯಪ್ಪನ ಗಡ್ಡ ಬೆಳೆಯತೊಡಗಿತ್ತು. ಲುಂಗಿ,ಅಂಗಿಗಳ ಬದಲು ಖಾದಿ ಜುಬ್ಬ ಪೈಜಾಮಗಳು ಬಂದವು. ದಿನೇದಿನೇ ಮೌನಕ್ಕೆ ಜಾರತೊಡಗಿದ್ದ ಗದ್ದಿಗ್ಯಪ್ಪನನ್ನು ಕಂಡು 'ಇನ್ನು ಇವ್ನ ಕಥೆ ಮುಗೀತು' ಅಂದುಕೊಂಡರು ಕೆಲವರು. 'ಪಾಪಾ ಎಷ್ಟೂಂತ ನೋವು ತಡ್ಕತಾನೆ' ಅಂದರು ಮತ್ತೆ ಕೆಲವರು. ಹಿಂಗೆ ಊರಿಗೆ ಊರೇ ಥರಾವರಿ ಆಡಿಕೊಳ್ಳುತ್ತಿರುವಾಗ ಅದೊಂದು ದಿನ ಯಾವುದೋ ಊರಿನಲ್ಲಿ ಅಡ್ಡಾಡುತ್ತಿದ್ದ ರಾಮಣ್ಣನನ್ನು ಹುಡುಕಿಕೊಂಡು ಹೋಗಿ ಕರೆದುಕೊಂಡು ಬಂದ ಗದ್ದಿಗ್ಯಪ್ಪ ಅದರ ಮಾರನೆಯ ದಿನವೇ ತನ್ನ ಹನ್ನೆರಡು ಎಕರೆ ಜಮೀನಿನಲ್ಲಿ ಮಗನ ಸಮಾಧಿಯಿರುವ ಎರಡು ಎಕರೆಯನ್ನು ಬಿಟ್ಟು ಮಿಕ್ಕಿದ್ದನ್ನು ದಾನ ಮಾಡುವುದದಾಗಿ ಘೋಷಿಸಿಬಿಟ್ಟಿದ್ದ. ಅಂಥವರನ್ನು ಹುಡುಕಿ ಹಂಚುವ ಕೆಲಸವನ್ನು ರಾಮಣ್ಣನಿಗೆ ವಹಿಸಿದ್ದ. ವಾರೊಪ್ಪತ್ತು ಅನ್ನುವುದರೊಳಗೆ ಗದ್ದಿಗ್ಯಪ್ಪ ಕೇವಲ ಎರಡು ಎಕರೆಯ ಮಾಲೀಕ ಮಾತ್ರ ಆಗಿದ್ದ. ಒಂದಷ್ಟು ದಿನ ಕಳೆದ ಮೇಲೆ ಗದ್ದಿಗ್ಯಪ್ಪನ ಮನೆಗೆ ವಿನೋಬಾ ಭಾವೆ ಹಾಗೂ ಗಾಂಧೀಜಿಯ ದೊಡ್ಡವೆರಡು ಭಾವ ಚಿತ್ರಗಳ ಪಟಗಳು ಬಂದು,ಅವು ನಡುಮನೆಯ ಗೋಡೆಯಲ್ಲಿ ನೇತಾಡತೊಡಗಿದ್ದವು.

4

ಒಬ್ಬಂಟಿಯಾದ ಮೇಲೆ ಗದ್ದಿಗ್ಯಪ್ಪ ಮನೆಯನ್ನು ಸೇರುವುದೇ ಕಡಿಮೆಯಾಗಿಹೋಗಿತ್ತು. ರಾಮಣ್ಣನ ಜೊತೆ ಊರೂರು ಸುತ್ತುತ್ತಿದ್ದ. ಹೊಲ ಬದುಕಿನ ಬಗ್ಗೆಯೂ ನಿರಾಸಕ್ತಿಗೊಳಗಾಗಿದ್ದ. ಹಂಗಾಗಿ ಯಾವತ್ತೋ ಅಪರೂಪಕ್ಕೊಮ್ಮೆ ಊರಿನ ಮುಖ ನೋಡುತ್ತಿದ್ದ ಗದ್ದಿಗ್ಯಪ್ಪ ಇದ್ದ ಎರಡು ಎಕರೆ ಹೊಲವನ್ನೂ ಬೇರೆಯವರಿಗೆ ಕೋರಿಗೆ ಅಂತಕೊಟ್ಟು ಅವರು ಕೊಟ್ಟಷ್ಟು ಇಸುಕೊಳ್ಳುತ್ತಿದ್ದ. ಅದರಲ್ಲೂ ಅವರಿವರಿಗೆ ಅಂತ ಒಂದಷ್ಟು ಹಂಚುತ್ತಿದ್ದ. ಹಿಂಗೆ ಸಾಗತೊಡಗಿದ್ದ ಬದಕಿನ ಏಕತಾನತೆಯಿಂದ ಗದ್ದಿಗ್ಯಪ್ಪನಿಗೆ ತಾನು ತನ್ನದು ಅನ್ನುವುದರ ಬಗ್ಗೆ